# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 16-07-2022 ರಂದು ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ. | ಜಂಟಿ ನಿರ್ದೇಶಕರು (ನಗರಯೋಜನೆ-ಸ್ಕ್ವಾಡ್) ಹಾಗೂ ನೋಡಲ್ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ-30 ಕೆ.ಜಿ.ಹಳ್ಳಿ |
| 2 | ಶ್ರೀ.ಹರ್ಷಿತ್ ಕುಮಾರ್ | ಸಹಾಯಕ ಅಭಿಯಂತರರು, & ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ. |
| 3 | ಶ್ರೀ.ನಾಗರಾಜ್ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.23 & 30 |
| 4 | ಶ್ರೀ.ಸತೀಶ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5 | ಶ್ರೀ.ಮಂಜುನಾಥ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಕುಮಾರಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-30 |
| 7 | ಶ್ರೀ.ಶಿವಕುಮಾರ್ | ಮಾರ್ಷಲ್ |
| 8 | ಶ್ರೀ.ಸೈಯದ್ ಜಮೀಲ್ | ಸ್ಥಳೀಯರು |
| 9 | ಶ್ರೀ.ಎಷಾನ್ | ಸ್ಥಳೀಯರು |
| 10 | ಶ್ರೀ.ಫಹೀಮ್ ಖಾನ್ | ಸ್ಥಳೀಯರು |
| 11 | ಶ್ರೀ.ಜೆ.ಮಹೇಂದ್ರನ್ | ಸ್ಥಳೀಯರು |
| 12 | ಶ್ರೀ.ಪ್ರವೀಣ್ | ಸ್ಥಳೀಯರು |
| 13 | ಶ್ರೀ.ಎರ್ರನ್ ಕುಮಾರ್ | ಸ್ಥಳೀಯರು |

ವಾರ್ಡ್ ಸಮಿತಿಯ ನೋಡಲ್ ಅಧಿಕಾರಿ ರವರು ಮತ್ತು ಸದಸ್ಯ ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

<u>1) ಘನತ್ಯಾಜ್ಯ ನಿರ್ವಹಣೆ</u>:-ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯ 2ನೇ ಮುಖ್ಯರಸ್ತೆ, ಆರೋಕ್ಯಮ್ಮ ಲೇಔಟ್‌ನ ಟ್ರಾನ್ಸ್‌ಫಾರ್ಮರ್ ಬಳಿ ಸಾರ್ವಜನಿಕರು ಕಸವನ್ನು ಎಸೆಯುತ್ತಿದ್ದು, ಸದರಿ ಸ್ಥಳದಲ್ಲಿ ಬ್ಲಾಕ್‌ಸ್ಪಾಟ್ ನಿರ್ಮಾಣಗೊಂಡಿರುತ್ತದೆ ಹಾಗೂ ವಿನೋಭನಗರ 2ನೇ ಮುಖ್ಯರಸ್ತೆಯಲ್ಲಿ ಪ್ರದೇಶದಲ್ಲಿರುವ ಪೀಠೋಪಕರಣಗಳ ಮಳಿಗೆಯವರು ಮರಗಳ ಕಸವನ್ನು ರಸ್ತೆಯಲ್ಲಿ ಎಸೆಯುತ್ತಿದ್ದು, ಸಾರ್ವಜನಿಕರು ಹಲವು ಬಾರಿ ಸೂಚಿಸಿದರೂ ಸಹ ಕಸವನ್ನು ತೆರವುಗೊಳಿಸಿರುವುದಿಲ್ಲ ಎಂದು ಶ್ರೀ.ಮಹೇಂದ್ರನ್ ಮತ್ತು ಶ್ರೀ.ಎರ್ರನ್ ಕುಮಾರ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕುಮಾರಿ ಮೋನಿಕಾ, ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ :-ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ **ಬೆಂಗಳೂರು**)</u>

2) <u>**ಬೀದಿ ದೀಪಗಳ ನಿರ್ವಹಣೆ** ಬಗ್ಗೆ</u>:-ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿನ, ಎಲ್.ಇ.ಡಿ ಬೀದಿ ದೀಪಗಳ ಮದರ್ ಬೋರ್ಡ್ ದುಸ್ಥಿತಿಯಲ್ಲಿದ್ದು, ಇದರಿಂದಾಗಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಹಾಗೂ ಸಾಕಷ್ಟು ಬಾರಿ ಸೂಚಿಸಿದರೂ ಸಹ ಕ್ರಮ ಕೈಗೊಂಡಿರುವುದಿಲ್ಲವೆಂದು ಶ್ರೀ.ಫಹೀಮ್ ಖಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೆ.ಇ.ಬಿ ಅಧಿಕಾರಿಗಳಿಗೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ: **ಸಹಾಯಕ** ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ **ಬಿ.ಬಿ.ಎಂ.ಪಿ**)</u>

3) <u>**ನೀರು** ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-</u> ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ನೀರಿನ ಮೀಟರ್‌ಗಳನ್ನು ಅಳವಡಿಸಲು ಹೆಚ್ಚಿನ ಶುಲ್ಕ ಪಡೆಯುತ್ತಿದ್ದು, ಶುಲ್ಕದ ಬಗ್ಗೆ ಪಾರದರ್ಶಕತೆಯನ್ನು ತೋರಬೇಕೆಂದು ಶ್ರೀ.ಎಷಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ 5ನೇ, 6ನೇ ಮುಖ್ಯರಸ್ತೆ ಮತ್ತು 2ನೇ ಅಡ್ಡರಸ್ತೆ, ಪಿಳ್ಳಣ್ಣಗಾರ್ಡನ್‌ನಲ್ಲಿ ದಿನನಿತ್ಯ ಕುಡಿಯುವ ನೀರಿನ ಸರಬರಾಜು ಆಗದೇ ಇದ್ದರೂ ನೀರಿನ ಬಿಲ್ ಹೆಚ್ಚಾಗಿ ಬರುತ್ತಿರುತ್ತದೆ ಎಂದು ಶ್ರೀ.ಪ್ರವೀಣ್ ರವರು ತಿಳಿಸಿರುತ್ತಾರೆ ಹಾಗೂ ಕುಡಿಯುವ ನೀರು ಕಲುಷಿತಗೊಳ್ಳುತ್ತಿದ್ದು, ಅದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಶ್ರೀ.ಎರ್ರನ್ ರವರು ತಿಳಿಸಿರುತ್ತಾರೆ.

ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಸತೀಶ್, ಸಹಾಯಕ ಅಭಿಯಂತರರು. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಮಾಹಿತಿ ಸಲ್ಲಿಸಬೇಕೆಂದು ವಾರ್ಡ್‌ನ ನೊಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ :- ಸ.ಕಾ.ಅ.ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್)</u>

4) <u>**ಕಾಮಗಾರಿ** ಇಲಾಖೆ</u>:- ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿನ ಪಿಳ್ಳಣ್ಣಗಾರ್ಡನ್‌ನ 8ನೇ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳಿದ್ದು, ಅದನ್ನು ಕೂಡಲೇ ಮುಚ್ಚಬೇಕೆಂದು ಶ್ರೀ.ವಿ.ಮಹೇಂದ್ರನ್ ರವರು ತಿಳಿಸಿರುತ್ತಾರೆ ಹಾಗೂ ವಾಹನಗಳ ದಟ್ಟಣೆ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕೂಡು ರಸ್ತೆಗಳಲ್ಲಿ ಜೀಬ್ರಾ ಕ್ರಾಸಿಂಗ್ ಪೇಯಿಂಟ್ ಅನ್ನು ಮಾಡಲು ಶ್ರೀ.ಚಂದ್ರಶೇಖರ್ ರವರು ತಿಳಿಸಿರುತ್ತಾರೆ ಹಾಗೂ ವಿನೋಭನಗರ ಬಿ.ಎಂ.ಲೇಔಟ್‌ನಲ್ಲಿನ ಕೊಳವೆ ಬಾವಿಗಳಿಂದ ಪೈಪ್‌ಲೈನ್ ಸಂಪರ್ಕವನ್ನು ಕಲ್ಪಿಸಿ ನೀರು ಸರಬರಾಜು ಮಾಡಲು ಶ್ರೀ.ಇರ್ಫಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ವಿನೋಭನಗರ ಕ್ವಾಟ್ರಸ್‌ನಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ.ಗಳು ಹಾಗೂ ಇನ್ನಿತರೆ ಕಡೆಗಳಲ್ಲಿ ಸಿ.ಸಿ.ಟಿ.ವಿ.ಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಶ್ರೀ.ಎರ್ರನ್ ಕುಮಾರ್ ರವರು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರೊಂದಿಗೆ ಚರ್ಚಿಸಲಾಗಿದ್ದು, ಜೀಬ್ರಾ ಕ್ರಾಸ್ ಪೇಯಿಂಟ್ ಮಾಡಿಸುವುದಾಗಿ ಹಾಗೂ ಸಿ.ಸಿ.ಟಿ.ವಿಗಳ ದುರಸ್ಥಿ ಕಾರ್ಯಗಳ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಕೊಳವೆ ಬಾವಿಗಳ ಪೈಪ್‌ಲೈನ್ ಕಾಮಗಾರಿಯು ಚಾಲ್ತಿಯಲ್ಲಿರುವುದಾಗಿ ಶ್ರೀ.ನಾಗರಾಜ್, ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ(ಪ್ರಭಾರ)ರವರು ಸಭೆಯಲ್ಲಿ ತಿಳಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ)

5) ಬೆಸ್ಕಾಂ ವಿಭಾಗ:- ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯ ವಿನೋಭನಗರದ ಕಾರ್ಪೋರೇಟರ್ ಕಛೇರಿಯ ಪಕ್ಕದಲ್ಲಿ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್ ಅನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಶ್ರೀ.ಜಮೀಲ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಪಿಳ್ಳಣ್ಣಗಾರ್ಡನ್ 9ನೇ ಮುಖ್ಯರಸ್ತೆಯಲ್ಲಿ ಬೆಸ್ಕಾಂ ರವರು ರಸ್ತೆಯನ್ನು ಅಗೆದು ಅದನ್ನು ಮುಚ್ಚದೆ ಹಾಗೆಯೇ ಬಿಟ್ಟಿರುವುದರಿಂದ ಅನಾಹುತಗಳು ಸಂಭವಿಸುತ್ತಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಶ್ರೀ.ಚಂದ್ರಶೇಖರ್ ರವರು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲು ಬೆಸ್ಕಾಂ ವಿಭಾಗದವರಿಗೆ ವಾರ್ಡ್‌ನ ನೊಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ವಿಭಾಗ ಬಿ.ಬಿ.ಎಂ.ಪಿ)

6) ಅರಣ್ಯ ಇಲಾಖೆ:- ವಾರ್ಡ್ ವ್ಯಾಪ್ತಿಯ ಪಿಳ್ಳಣ್ಣಗಾರ್ಡನ್ 5ನೇ ಮುಖ್ಯರಸ್ತೆ, ದೇವರಾಜ್ ಅರಸ್ ರಸ್ತೆ, ಟೆಲಿಗ್ರಾಫ್ ಸ್ಟ್ರೀಟ್‌ನಲ್ಲಿ 2 ಮರಗಳು ಬೀಳುವ ಸ್ಥಿತಿಯಲ್ಲಿದ್ದು, ಮರಗಳನ್ನು ತೆರವುಗೊಳಿಸಲು ಹಾಗೂ ಪಿಳ್ಳಣ್ಣಗಾರ್ಡನ್ ಪ್ರದೇಶದ ಹಲವು ರಸ್ತೆಗಳಲ್ಲಿ ಮರಗಳ ಕೊಂಬೆಗಳನ್ನು ಕತ್ತರಿಸಲು ಶ್ರೀ.ಎಷಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಮಳೆಗಾಲದಿಂದಾಗಿ ಈ ಸಮಸ್ಯೆ ಹೆಚ್ಚಾಗಿದ್ದು, ಸಾಕಷ್ಟು ಬಾರಿ ಸೂಚಿಸಿದರೂ ಸಹ ಅರಣ್ಯ ಇಲಾಖೆಯ ಸಿಬ್ಬಂದಿಗಳು ಯಾವುದೇ ಸಮಸ್ಯೆಗೆ ಸಹಕರಿಸದೆ ಹಾಗೂ ದೂರವಾಣಿ ಕರೆಗಳಿಗೆ ಸ್ಪಂದಿಸದೆ ಬೇಜವಾಬ್ದಾರಿತನವನ್ನು ತೋರುತ್ತಿದ್ದಾರೆಂದು ಎಲ್ಲರೂ ದೂರಿರುತ್ತಾರೆ.

ಸದರಿ ವಿಷಯದ ಬಗ್ಗೆ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಿರುತ್ತಾರೆ ತಪ್ಪಿದಲ್ಲಿ ಅಧಿಕಾರಿಗಳ ಬಗ್ಗೆ ಮಾನ್ಯ ವಿಶೇಷ ಆಯುಕ್ತರು (ಪೂರ್ವ) ವಲಯ ಬಿ.ಬಿ.ಎಂ.ಪಿ ರವರಿಗೆ ವರದಿ ಮಾಡುವುದಾಗಿ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ವಲಯ ಅರಣ್ಯಾಧಿಕಾರಿಗಳು ಪೂರ್ವ ಬಿ.ಬಿ.ಎಂ.ಪಿ)

7) ಕಾನೂನು ಸುವ್ಯವಸ್ಥೆ (ಪೋಲೀಸ್ ಇಲಾಖೆ)- ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯ ಪಿಳ್ಳಣ್ಣಗಾರ್ಡನ್‌ನಲ್ಲಿ ಮನೆಯ ಅಂಗಳದಲ್ಲಿನ ಮೋಟರ್‌ಗಳು ಹಾಗೂ ಪಿ.ವಿ.ಸಿ ಪೈಪ್‌ಗಳು ಕಳ್ಳತನವಾಗುತ್ತಿವೆ ಎಂದು ಶ್ರೀ.ಸತ್ಯನಾರಾಯಣ ರವರು ತಿಳಿಸಿರುತ್ತಾರೆ. ಹಾಗೂ ಹಿಂದೂ ರುಧ್ರಭೂಮಿಯ ಸುತ್ತಮುತ್ತ ಕೆಲವು ಕಿಡಿಗೇಡಿಗಳು ಕಾನೂನು ಬಾಹಿರ ಚಟುವಟಿಕೆಯನ್ನು ನಡೆಸುತ್ತಿದ್ದಾರೆಂದು ಹಾಗೂ ಹಿಂದೂ ರುದ್ರಭೂಮಿಯ ಸುತ್ತಮುತ್ತಲು ದುಸ್ಥಿತಿಯಲ್ಲಿರುವ ವಾಹನಗಳನ್ನು ಹಾಗೆಯೇ ರಸ್ತೆಯ ಬದಿಯಲ್ಲಿ ಬಿಟ್ಟಿರುವುದರಿಂದ ಸದರಿ ಸ್ಥಳದಲ್ಲಿ ಮಾದಕ ವಸ್ತುಗಳ ಸೇವನೆ ಹೆಚ್ಚಾಗಿದೆಯೆಂದು ಶ್ರೀ.ಸತ್ಯನಾರಾಯಣ ರವರು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಕೂಡಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ)

8) <u>ಕಾನೂನು ಸುವ್ಯವಸ್ಥೆ (ಸಂಚಾರಿ ಪೊಲೀಸ್ ಇಲಾಖೆ)</u>- ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯ ಬಿಲಾಲ್ ಮಸೀದಿಯ ಹತ್ತಿರ ಮೆಟ್ರೋ ಕಾಮಗಾರಿ ಜಾರಿಯಲ್ಲಿದ್ದು, ರಸ್ತೆಯ ಎರಡೂ ಬದಿಯಲ್ಲಿ ವಾಹನಗಳ ನಿಲುಗಡೆ ಮಾಡುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ಶಾಲಾ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಶ್ರೀ.ಎರ್ರನ್‌ಕುಮಾರ್ ರವರು ತಿಳಿಸಿರುತ್ತಾರೆ ಹಾಗೂ ಹಿಂದೂ ರುದ್ರಭೂಮಿಯ ಸುತ್ತಮುತ್ತಲು ದುಸ್ಥಿತಿಯಲ್ಲಿರುವ ವಾಹನಗಳನ್ನು ಹಾಗೆಯೇ ರಸ್ತೆಯ ಬದಿಯಲ್ಲಿ ಬಿಟ್ಟುಹೋಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಶ್ರೀ.ಇರ್ಫಾನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಕೂಡಲೆ ಕ್ರಮ ಕೈಗೊಳ್ಳುವಂತೆ ಸಂಚಾರಿ ಪೊಲೀಸ್ ಠಾಣೆ ರವರಿಗೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

**(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ)**

ಮುಂದುವರೆದು ದಿನಾಂಕ: 16.07.2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಬೆಸ್ಕಾಂ, ಸಂಚಾರಿ ಪೊಲೀಸ್ ಠಾಣೆ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಗೂ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಿರುತ್ತಾರೆ ತಪ್ಪಿದಲ್ಲಿ ಸದರಿ ಅಧಿಕಾರಿಗಳ ಬಗ್ಗೆ ಮಾನ್ಯ ವಿಶೇಷ ಆಯುಕ್ತರು (ಪೂರ್ವ) ವಲಯ ಬಿ.ಬಿ.ಎಂ.ಪಿ ರವರಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

18/07/22
ಜಂಟಿ ನಿರ್ದೇಶಕರು (ನಗರ ಯೋಜನೆ- ಸ್ಕ್ವಾಡ್)
ಹಾಗೂ ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

<u>ಪ್ರತಿಯನ್ನು:</u>

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಪೂರ್ವ) ವಲಯ ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಫ್ರೇಜರ್‌ಟೌನ್ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಆರಕ್ಷಕ ವೃತ್ತ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್‌ಠಾಣೆರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಆರಕ್ಷಕ ವೃತ್ತ ನಿರೀಕ್ಷಕರು ಸಂಚಾರಿ ಪೊಲೀಸ್ ಠಾಣ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಉಪ-ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಕಛೇರಿ ಕಡತಕ್ಕೆ.